**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ**

**ಉಪಸ್ಥಿತರುಃ ಶ್ರೀ ಪ್ರಕಾಶ್ ವಿ.,** ಬಿ.ಎ.ಎಲ್., ಎಲ್.ಎಲ್.ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಹಾವೇರಿ

**ದಿನಾಂಕಃ 17 ನೇ ಮೇ 2024**

**ಸಿ.ಸಿ.ನಂ.40/2017**
**(ಕ್ರೈಂ ನಂ.106/2016)**

**ಫಿರ್ಯಾದುದಾರರುಃ** ರಾಜ್ಯದ ಪರವಾಗಿ
(ಹಾವೇರಿ ಶಹರ ಪೊಲೀಸ್ ಠಾಣೆ)

***(ಹಿರಿಯ ಸ.ಸ. ಅಭಿಯೋಜಕರು)***

**ವಿರುದ್ಧ**

**ಆರೋಪಿಃ** **2.** ಕಮರುನ್ನಿಶ @ ಮುನ್ನಿ
ಕೋಂ ಮಹಬೂಬಸಾಬ್ ಚಲ್ಲಾಳ,
ವಾಸಃ ಶಿವಲಿಂಗನಗರ,
ಹಾವೇರಿ ನಗರ.

**(ಪ್ರತಿನಿಧಿಸುವವರು ಶ್ರೀ. ಯು.ಎಸ್.ಜಿ., ವಕೀಲರು)**

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.239 ರ ಅಡಿಯಲ್ಲಿ 2 ನೇ ಆರೋಪಿಯ ಪರ ಅರ್ಜಿಯನ್ನು ಸಲ್ಲಿಸಿ, ಭಾ. ದಂ. ಸಂಹಿತೆ ಕಲ.420, 465, 201 ಸಹಕಲಂ.34 ರ ಅಪರಾಧಗಳಿಂದ ಬಿಡುಗಡೆ ಮಾಡಬೇಕೆಂದು (Discharge) ಕೋರಿರುತ್ತಾರೆ.

**2. <u>ಅರ್ಜಿಯಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ -</u>**

2 ನೇ ಆರೋಪಿ ತನ್ನ ಅರ್ಜಿಯಲ್ಲಿ, ದೂರುದಾರರು ಸಲ್ಲಿಸಿದ ಖಾಸಗಿ ದೂರನ್ನು ಪಿ.ಸಿ.ಆರ್ 22/2015 ರಂತೆ ನೋಂದಣಿ ಮಾಡಿಕೊಂಡು, ತನಿಖೆಗಾಗಿ ಹಾವೇರಿ ಶಹರ ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟಿದ್ದು, ಪೊಲೀಸರು ಸರಿಯಾಗಿ ತನಿಖೆ ಮಾಡದೇ ಪಿರ್ಯಾದಿಯ ಹೇಳಿಕೆ ಮೇರೆಗೆ ಪಿರ್ಯಾದಿಗೆ ಸಹಾಯ ಮಾಡಲು, ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ, ಆರೋಪಿತರ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ದೂರಿನಲ್ಲಿ 2 ನೇ ಆರೋಪಿ ವಿರುದ್ಧ ಯಾವುದೇ ಸ್ಪಷ್ಟ ಹಾಗೂ ನೇರವಾದ ಆಪಾದನೆ ಮಾಡಿರುವುದಿಲ್ಲ. 2 ನೇ ಆರೋಪಿ 1 ನೇ ಆರೋಪಿಯೊಂದಿಗೆ ಸೇರಿ ಅಪರಾಧ ಮಾಡಿರುವ ಬಗ್ಗೆ ಯಾವುದೇ ಸಾಕ್ಷಾದಾರಗಳು ಇರುವುದಿಲ್ಲ. ದೂರಿನಲ್ಲಿ ಹೇಳಿರುವಂತೆ ಆರೋಪಿತರು ನಕಲಿ ದಾನಪತ್ರ ಸೃಷ್ಟಿ ಮಾಡಿದ್ದಾರೆ ಎಂದು ಹೇಳಿದ್ದು, ಅದರ ಬಗ್ಗೆ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 159/2015 ದಾಖಲಾಗಿದ್ದು, ಚಾಲ್ತಿಯಲ್ಲಿರುತ್ತದೆ. 2 ನೇ ಆರೋಪಿ ಸದರಿ ಅಪರಾಧಗಳ ಬಗ್ಗೆ ಮುಗ್ದರಾಗಿದ್ದು, ಆ ರೀತಿ ಯಾವುದೇ ಅಪರಾಧ ಮಾಡಿರುವುದಿಲ್ಲ. ಅಪರಾಧವನ್ನು ಆಕರ್ಷಿಸುವಂತಹ ಯಾವುದೇ ಸಂಗತಿಗಳು ಇರುವುದಿಲ್ಲ. ವಿನಾಕಾರಣ 2 ನೇ ಆರೋಪಿಗೆ ತೊಂದನೆ ನೀಡಲು ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ ಎಂದು ಕಾರಣಗಳನ್ನು ನೀಡಿ, 2 ನೇ ಆರೋಪಿಯನ್ನು ಅಪರಾಧಗಳಿಂದ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

**3.** ಅಭಿಯೋಜನೆಯ ಪರ ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ ಆರೋಪಿಯು ಆರೋಪಿತರ ತಾಯಿಯ ಆಸ್ತಿ ಸಿ.ಟಿ.ಎಸ್ ನಂ.23794/14+2378 ಎ ರಲ್ಲಿ 905.43 ಚ.ಮೀಟರ್ ನಿವೇಶನ ಹೊಂದಿದ್ದು, ಅದರಲ್ಲಿ 504 ಚದರ ಅಡಿ ವಿಸ್ತೀರ್ಣದ ಹಂಚಿನ ಮನೆ ಇದ್ದು, ಅದನ್ನು

ಪಡೆಯುವ ಕುರಿತು ಆರೋಪಿತರು ನಕಲಿ ದಾನಪತ್ರವನ್ನು ಸೃಷ್ಟಿಮಾಡಿ, ನಕಲಿ ಸಹಿಗಳನ್ನು ಮಾಡಿ, ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಲು ಸಿಟಿ ಸರ್ವೆ ಅಧಿಕಾರಿಗಳಿಗೆ ಅರ್ಜಿ ನೀಡಿದ್ದು, ಪಿರ್ಯಾದಿಗೆ ಮೋಸ ವಂಚನೆ ಮಾಡಿ, ಭಾ.ದಂ.ಸಂಹಿತೆ ಕಲಂ. 420, 465, 201 ಸಹಕಲಂ.34 ರ ಅಡಿಯಲ್ಲಿ ಅಪರಾಧ ಎಸಗಿದ್ದು, ದೋಷಾರೋಪಣ ಪತ್ರ ಸಲ್ಲಿಸಲಾಗಿರುತ್ತದೆ. 2 ನೇ ಆರೋಪಿಯು ವಂಚನೆ ಪ್ರಕರಣದಲ್ಲಿ ಭಾಗಿ ಆಗಿದ್ದು, ಸಾಕಷ್ಟು ಸಾಕ್ಷಿ ಪುರಾವೆಗಳು ಇದ್ದ ಕಾರಣ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. 2 ನೇ ಆರೋಪಿಯ ವಿರುದ್ಧ ಮೇಲ್ನೋಟಕ್ಕೆ ಸಾಕಷ್ಟು ಸಾಕ್ಷಾಧಾರಗಳು ಇದ್ದು, ವಿಚಾರಣೆ ಎದುರಿಸತಕ್ಕದ್ದಾಗಿರುತ್ತದೆ. ದೋಷಾರೋಪಣೆ ರಚಿಸಲು ಮೇಲ್ನೋಟಕ್ಕೆ ಸಾಕಷ್ಟು ಸಾಕ್ಷ್ಯ ಇದೆಯೇ ಇಲ್ಲವೇ ಎಂಬುದನ್ನು ಮಾತ್ರ ಪರಿಗಣಿಸಬಹುದಾಗಿರುತ್ತದೆ ಎಂದು ತಕರಾರು ಮಾಡಿ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

**4.** ವಾದ ವಿವಾದವನ್ನು ಆಲಿಸಲಾಯಿತು.

**5.** ಈ ಮೇಲ್ಕಂಡ ಕಾರಣಗಳಿಂದ ಈ ನ್ಯಾಯಾಲಯ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

ಅಂಶ 1: ಅರ್ಜಿಯನ್ನು ಪುರಸ್ಕರಿಸಲು ಮತ್ತು ಅಪರಾಧಗಳಿಂದ 2 ನೇ ಆರೋಪಿಯನ್ನು ಬಿಡುಗಡೆ ಮಾಡಲು ಸಾಕಷ್ಟು ಕಾರಣಗಳನ್ನು ನೀಡಿರುತ್ತಾರೆಯೇ?

ಅಂಶ 2: ಯಾವ ಆದೇಶ ?

**6.** ಕಡತದಲ್ಲಿ ಲಭ್ಯವಿರುವ ದಾಖಲಾತಿ ಸಾಕ್ಷ ಹಾಗೂ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳ ಆಧಾರದ ಮೇಲಿಂದ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ .

ಅಂಶ 1 : ನಕಾರಾತ್ಮಕವಾಗಿ

ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ

**ಕಾ ರ ಣ ಗ ಳು**

**7. ಅಂಶ 1:** ಪಿರ್ಯಾದುದಾರರು ದಂ.ಪ್ರ.ಸಂಹಿತೆ ಕಲಂ.200 ರ ಅಡಿಯಲ್ಲಿ ಭಾ.ದಂ.ಸಂಹಿತೆ ಕಲಂ.420 ರ ಅಪರಾಧಕ್ಕೆ ಪಿ.ಸಿ. ಆರ್ ನಂ.22/2015 ರಂತೆ ಖಾಸಗಿ ದೂರನ್ನು ದಾಖಲಿಸಿರುತ್ತಾರೆ. ಸದರಿ ದೂರನ್ನು ತನಿಖೆಗಾಗಿ ಹಾವೇರಿ ಶಹರ ಪೊಲೀಸ್ ಠಾಣೆಗೆ ರವಾನಿಸಲಾಗಿದ್ದು, ಠಾಣಾ ಮೊಕದ್ದಮೆ ಸಂಖ್ಯೆ 106/2016 ರಂತೆ ಭಾ.ದಂ.ಸಂಹಿತೆ ಕಲಂ.420, 465 ರ ಅಪರಾಧಗಳಿಗಾಗಿ ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ತನಿಖಾಧಿಕಾರಿಯು ಸಂಪೂರ್ಣ ತನಿಖೆ ಮಾಡಿ, ಭಾ.ದಂ.ಸಂಹಿತೆ ಕಲಂ.420, 465, 201 ಸಹಕಲಂ.34 ರ ಅಡಿಯಲ್ಲಿನ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು ಸಿ.ಸಿ ನಂ.40/2017 ರಂತೆ ಕ್ರಿಮಿನಲ್ಲಿ ಪ್ರಕರಣವಾಗಿ ನೋಂದಣಿ ಮಾಡಿಕೊಂಡು ಸಮನ್ಸ ಜಾರಿ ಮಾಡಲಾಗಿರುತ್ತದೆ. 2 ನೇ ಆರೋಪಿ ಮಾನ್ಯ ಸೆಷನ್ಸ ನ್ಯಾಯಾಲಯದಿಂದ ಕ್ರಿಮಿನಲ್ ಮಿಸ್ ನಂ.772/2018 ರಂತೆ ನಿರೀಕ್ಷಣಾ ಜಾಮೀನನ್ನು ಪಡೆದು, ವಕೀಲರ ಮೂಲಕ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಆಗಿರುತ್ತಾರೆ. 1 ನೇ ಆರೋಪಿಯೂ ಸಹ ವಕೀಲರ ಮೂಲಕ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಆಗಿರುತ್ತಾರೆ. ದೋಷಾರೋಪಣಾ ಪೂರ್ವ ವಾದಕ್ಕಾಗಿ ಮುಂದೂಡಿದ ನಂತರ 2 ನೇ ಆರೋಪಿ ಪರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**8.** ಪಿರ್ಯಾದಿ ಮತ್ತು ಆರೋಪಿತರ ವಿವಾದಿತ ಆಸ್ತಿ 9.50 ಗುಂಟೆ ಮನೆ ಮತ್ತು ಖಾಲಿ ನಿವೇಶನ ಎಂದು ದಿನಾಂಕ 15.08.2007 ರಿಂದ 14.09.2014 ರ ಅವದಿಯಲ್ಲಿ ಆರೋಪಿತರು ಸದರಿ ಆಸ್ತಿಯನ್ನು ಮೋಸ ಮತ್ತು ವಂಚನಯಿಂದ ಪಡೆಯುವ ದುರುದ್ದೇಶದಿಂದ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ, ಪಿರ್ಯಾದಿ ಮತ್ತು 1 ನೇ ಆರೋಪಿಯ ಮೃತ ತಾಯಿ ಶ್ರೀಮತಿ ಖೈರುನಾಬಿ ಚಳ್ಳಾಳ ರವರು ಮರಣ ಹೊಂದುವ ಪೂರ್ವದಲ್ಲಿ, ದಿನಾಂಕ 15.08.2007 ರಂದು 1 ನೇ ಆರೋಪಿ ಸದರಿ ಆಸ್ತಿಯನ್ನು ತಾನೊಬ್ಬನೇ ಅನುಭವಿಸಲು ದಾನಪತ್ರವನ್ನು ಮೃತ ಖೈರುನಬಿ ಬರೆದುಕೊಟ್ಟ ಹಾಗೆ ಪತ್ರಕ್ಕೆ ತಾನೇ ಸಹಿ ಮಾಡಿ, ದಾಖಲೆಯನ್ನು ಸೃಷ್ಟಿ ಮಾಡಿ, ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಅರ್ಜಿ ಕೊಟ್ಟಿದ್ದು ಇರುತ್ತದೆ. ಇಬ್ಬರೂ ಆರೋಪಿತರು ಸದರಿ ಆಸ್ತಿಯನ್ನು ದುರುದ್ದೇಶದಿಂದ ಪಡೆಯಲು ನಕಲಿ ಬಾಂಡನ್ನು ತಯಾರಿಸಿ ಮೃತ ಖೈರುನಬಿ ರವರ ಸಹಿಯನ್ನು ನಕಲಿ ಮಾಡಿ, ಮೂಲ ಬಾಂಡ್ ಪತ್ರವನ್ನು ಹಾಜರು ಪಡಿಸದೇ ಎಲ್ಲಿಯೋ ಕಳೆದು ಹೋಗಿರುತ್ತದೆ ಎಂದು ಹೇಳಿ ಮೂಲ ದಾನಪತ್ರವನ್ನು ನಾಶ ಪಡಿಸಿ, ಸಾಕ್ಷ್ಯ ನಾಶ ಮಾಡಿರುವುದು ಕಂಡು ಬರುತ್ತದೆ. ಆರೋಪಿತರು ದುರುದ್ದೇಶದಿಂದ ಆಸ್ತಿಯನ್ನು ಪಡೆಯಲು ಪಿರ್ಯಾದಿಗೆ ಮತ್ತು ಪಿರ್ಯಾದಿಗೆ ಮೋಸ ವಂಚನೆ ಮಾಡಿ, ಮೂಲ ದಾನಪತ್ರವನ್ನು ನಾಶ ಪಡಿಸಿ, ಅಪರಾಧ ಮಾಡಿದ್ದು, ಕಲಂ..420, 465, 201 ಸಹಕಲಂ.34 ರ ಅಡಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ಆರೋಪಿಸಿ, ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**9.** ತನಿಖಾ ಹಂತದಲ್ಲಿ ತನಿಖಾಧಿಕಾರಿಯು ಸಾಕಷ್ಟು ದಾಖಲೆಗಳನ್ನು ಸಂಗ್ರಹಿಸಿರುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ. ಮೃತ ಖೈರುನ್ನಬಿರವರ ಮೂಲ ಸಹಿಗಳಿರುವ ದಾಖಲೆಗಳನ್ನು ಸಂಗ್ರಹಿಸಲಾಗಿರುತ್ತದೆ. ಭೂ ಮಾಪನ ಇಲಾಖೆಯಲ್ಲಿ ಆರೋಪಿತರು ಹಾಜರು ಪಡಿಸಿರುವ ದಾನ ಪತ್ರದ (ಭಕ್ಷೀಸ

ದೃಡೀಕರಣ ಪತ್ರ) ಪ್ರತಿಯನ್ನು ಸಂಗ್ರಹಿಸಲಾಗಿರುತ್ತದೆ. ತನಿಖಾಧಿಕಾರಿಯ ಅಂತಿಮ ವರದಿ ಮತ್ತು ದಾಖಲೆಗಳ ಆಧಾರದಿಂದ ಭಾ.ದಂ.ಸಂಹಿತೆ ಕಲಂ.420, 465, 201 ಸಹಕಲಂ.34 ರ ಅಪರಾಧಕ್ಕೆ ದೋಷಾರೋಪಣೆ ರಚಿಸಲು ಸಾಕಷ್ಟು ಕಾರಣಗಳು ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

**10.** 2 ನೇ ಆರೋಪಿ ತನ್ನ ಅರ್ಜಿಯಲ್ಲಿ, ಯಾವುದೇ ಸಮಂಜಸವಾದ ಕಾರಣವನ್ನು ನೀಡಿರುವುದಿಲ್ಲ. 1 ನೇ ಆರೋಪಿ 2 ನೇ ಆರೋಪಿಯ ಗಂಡ ಆಗಿದ್ದು, ಆರೋಪಿತರಿಬ್ಬರೂ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಕಲಿ ಸಹಿಗಳನ್ನು ಮಾಡಿ, ವಂಚನೆ ಮಾಡಿದ ಆರೋಪ ಮಾಡಲಾಗಿರುತ್ತದೆ. ಅಂತಿಮ ವರದಿ ಮತ್ತು ಅದರೊಂದಿಗಿನ ಮೌಖಿಕ ಮತ್ತು ದಾಖಲಾತಿ ಸಾಕ್ಷದ ಆಧಾರದ ಮೇಲೆ ದೋಷಾರೋಪಣೆಯನ್ನು ರಚಿಸತಕ್ಕದಾಗಿರುತ್ತದೆ. ಆರೋಪಿ ತನ್ನ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳನ್ನು ಪ್ರಕರಣದ ವಿಚಾರಣಾ ಸಮಯದಲ್ಲಿ ಪರಿಗಣಿಸಬಹುದಾಗಿರುತ್ತದೆ. ತನಿಖಾಧಿಕಾರಿಯು ಹೆಚ್ಚುವರಿ ದೋಷಾರೋಪಣಾ ಪತ್ರವನ್ನು ಸಹ ಸಲ್ಲಿಸಲು ಅವಕಾಶವಿರುತ್ತದೆ. ಅರ್ಜಿಯನ್ನು ಪುರಸ್ಕರಿಸಲು ಮತ್ತು 2 ನೇ ಆರೋಪಿಯನ್ನು ಅಪರಾಧಗಳಿಂದ ಬಿಡುಗಡೆ ಮಾಡಲು ಸಮಂಜಸವಾದ ಕಾರಣಗಳನ್ನು ನೀಡಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ತಿರಸ್ಕರಿಸುವುದು ಸೂಕ್ತ ಎಂದು ನಿರ್ಣಯಿಸಿ **ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

**11.** **<u>ಅಂಶ 2</u>** : ಈ ಮೇಲ್ಕಂಡ ಕಾರಣಗಳಿಗಾಗಿ ಹಾಗೂ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳ ಆಧಾರದ ಮೇಲೆ ಈ ಅಂಶವನ್ನು ಈ ಕೆಳಕಂಡ ಅಂತಿಮ ಆದೇಶದಂತೆ ಉತ್ತರಿಸಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.239 ರ ಅಡಿಯಲ್ಲಿ 2 ನೇ ಆರೋಪಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿ ಆದೇಶಿಸಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟಿದ್ದು ನಂತರ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಮುದ್ರಣ ತೆಗೆದು ಅದರಲ್ಲಿನ ತಪ್ಪುಗಳನ್ನು ತಿದ್ದಿ ಇಂದು ದಿನಾಂಕಃ **17 ನೇ ಮೇ 2024** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಪ್ರಕಾಶ್.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**